ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **30-08-2023**

ಪಾಟೀ ಸವಾಲುಃ ಪ್ರತಿವಾದಿ ನಂ.4 ರವರ ಪರ ವಕೀಲರಾದ ಶ್ರೀ. VTB ರವರಿಂದಃ

1. ನಾನು ಖಾಯಂ ತರೀಖ ಕನಾಳ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು 12 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ವಾದಿಯರು ಈ ದಾವೆಯನ್ನು ಏನು ಪರಿಹಾರ ಬೇಡಿ ದಾವೆ ದಾಖಲಿಸಿದ್ದಾರೆ ನಿಮಗೆ ಗೊತ್ತಾ ಎಂದರೆ ಅವರು ತಮ್ಮ ಆಸ್ತಿಯನ್ನು ಬೇಡಿ ದಾವೆಯನ್ನು ದಾಖಲಿಸಿದ್ದಾರೆ ಎನ್ನುತ್ತಾರೆ. ನಾನು ಈ ದಾವೆಯಲ್ಲಿ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ದಾಖಲಿಸುವ ಪೂರ್ವದಲ್ಲಿ ವಾದಿಯರು ಸಲ್ಲಿಸಿದ ವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಈ ಹಿಂದೆ ಆಗಲಿ ಅಥವಾ ಪ್ರಸ್ತುತವಾಗಲಿ ಕನಾಳ ಗ್ರಾಮ ಪಂಚಾಯತಿಯ ಸದಸ್ಯನು ಇರುವುದಿಲ್ಲ. ನಮ್ಮ ಗ್ರಾಮದಲ್ಲಿ, ಗ್ರಾಮ ಪಂಚಾಯತಿ ವತಿಯಿಂದ ಸಾರ್ವಜನಿಕ ಘನ ಮತ್ತು ದ್ರವ್ಯ ತ್ಯಾಜ್ಯ ನಿರ್ವಾಹಣ ಘಟಕವನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಘಟಕವನ್ನು ಅಥಣಿ ತಾಲೂಕಿನ ಕನಾಳ ಗ್ರಾಮದ ಸರ್ಕಾರಿ ಗೌಟಾಣಾ ಜಮೀನು ರಿಸನಂ.1/ಅ ಕ್ಷೇತ್ರ 31 ಎಕರೆ 6 ಗುಂಟೆ ಪೈಕಿ 5 ಎಕರೆ ಜಮೀನಲ್ಲಿ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ 5 ಎಕರೆ ಜಮೀನು ಸಾರ್ವಜನಿಕ ಘನ ಮತ್ತು ದ್ರವ ತ್ಯಾಜ್ಯದ ನಿರ್ವಹಣೆಗಾಗಿ ಮಂಜೂರು ಆಗಿತ್ತು ಎಂದರೆ ಸರಿ. ಸದರಿ 5 ಎಕರೆ ಜಮೀನಿನ ಚಕಬಂದಿ ಪೂರ್ವಕ್ಕೆ ರಿಸನಂ.51 ನೇ ಜಮೀನು, ಪಶ್ಚಿಮಕ್ಕೆ ಇದೇ ರಿಸನಂ.ನ ಬಾಕಿ ಉಳಿಕ ಕ್ಷೇತ್ರ, ಉತ್ತರಕ್ಕೆ ರಿಸನಂ.10,11 ಮತ್ತು 14 ಮತ್ತು 15, ದಕ್ಷಿಣಕ್ಕೆ ಇದೇ ರಿಸನಂ.ನ ಬಾಕಿ ಉಳಿದ ಕ್ಷೇತ್ರ ಹಾಗೂ ರಸ್ತೆ ಎಂದರೆ ಸರಿ.

2. ಸದರಿ ದಾವೆಯಲ್ಲಿ ದಾವಾ ಆಸ್ತಿ ಸರ್ವೆ ನಂ.9999 ಅದರ ಕ್ಷೇತ್ರ 11 ಗುಂಟೆ ಇದೆ. ಸರ್ವೆ ನಂ.9999 ಇದು ಕನಾಳ ಗ್ರಾಮದಲ್ಲಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕನಾಳ ಗ್ರಾಮಕ್ಕೆ ಸಂಬಂಧಿಸಿದ ನಕಾಶೆಯನ್ನು ನೋಡಿರುವುದಿಲ್ಲ. ಸದರಿ ಸರ್ವೆ ನಂ. ಆಕಾರ ಬಂದು, PT ಶೀಟ ನಾನು ನೋಡಿರುವುದಿಲ್ಲ. ಈ ದಾವೆಯಲ್ಲಿ ದಾವಾ ಆಸ್ತಿಗಳು ಎಷ್ಟು ಇವೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.4 PDO ರವರು ವಾದಿಯ ಜಮೀನನ್ನು ಅತೀಕ್ರಮಣ ಮಾಡಿ ಕಂಪೌಂಡ ಗೋಡೆಯನ್ನು ಕಟ್ಟಿಲ್ಲ, ಅಲ್ವಾ ಎಂದರೆ ಸಾಕ್ಷಿಯು ಹೌದು ಕಂಪೌಂಡ ಗೋಡೆ ಕಟ್ಟಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ವಾದಿಗೆ ಸನ್ 1954 ರಲ್ಲಿ ಬಂದಿರುತ್ತದೆ ಆ ಬಗ್ಗೆ ನಾನು ದಾಖಲೆಯನ್ನು ನೋಡಿರುತ್ತೇನೆ. ನಾನು ಆ ಬಗ್ಗೆ ಉತಾರ ನೋಡಿದ್ದೇನೆ. ವಾದಿಯರು ಹೇಳುವ 11 ಗುಂಟೆ ಕ್ಷೇತ್ರಕ್ಕೆ 4 ನೇ ಪ್ರತಿವಾದಿಯು ಯಾವುದೇ

ಅತೀಕ್ರಮಣ ಮಾಡಿರುವುದಿಲ್ಲ ಮತ್ತು ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಯಾವ ದಿನಾಂಕದಂದು ಅತೀಕ್ರಮಣ ಮಾಡಿ ವಾದಿಯರಿಗೆ ತೊಂದರೆ ಕೊಟ್ಟರು ಎಂದರೆ ಸಾಕ್ಷಿಯು ನನಗೆ ನಿಖರವಾದ ದಿನಾಂಕ ಹೇಳಲು ಬರುವುದಿಲ್ಲ, ಅದರೆ 2 ವರ್ಷಗಳ ಹಿಂದೆ ಮಾಡಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿ ನಂ.4 ರವರು ವಾದಿಯರಿಗೆ ತೊಂದರೆ ಕೊಟ್ಟ ಬಗ್ಗೆ ವಾದಿಯರು ಪೋಲಿಸ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ.

3. ಪ್ರತಿವಾದಿ ನಂ.4 ರವರು ವಾದಿಯರು ಹೇಳುವ ದಾವಾ ಆಸ್ತಿಗೆ ಯಾವುದೇ ರೀತಿಯಿಂದ ಅತಿಕ್ರಮಣ ಮಾಡಿರುವುದಿಲ್ಲ ಮತ್ತು ವಾದಿಯರ ಕಬ್ಜೆಗೆ ಯಾವದೇ ರೀತಿಯಿಂದ ತೊಂದರೆ ಕೊಟ್ಟಿರುವುದಿಲ್ಲ ಹಾಗೂ ಅವರನ್ನು ದಾವಾ ಆಸ್ತಿಯಿಂದ ಹೊರಗೆ ಹಾಕಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರದವರು ಸದರಿ 5 ಎಕರೆ ಜಮೀನನ್ನು ಮಂಜೂರು ಮಾಡುವಾಗ ಸದರಿ ಜಮೀನು ಅತಿಕ್ರಮಣವಾಗಬಾರದು ಅಂತ ಸದರಿ 5 ಎಕರೆ ಜಮೀನಿನ ಸುತ್ತಲೂ ಕಂಪೌಂಡ ನಿರ್ಮಾಣ ಮಾಡಿಕೊಳ್ಳಬೇಕು ಅಂತ ಆದೇಶಿಸಿದ ಮೇರೆಗೆ 4 ನೇ ಪ್ರತಿವಾದಿಯು ಸದರಿ 5 ಎಕರೆ ಜಮೀನಿನ ಸುತ್ತಲೂ ಕಂಪೌಂಡ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಹೇಳುವ ದಾವಾ ಆಸ್ತಿಗೆ ಸಂಬಂದಿಸಿದಂತೆ ಈ ದಾವೆ ದಾಖಲಿಸುವ ಪೂರ್ವದಲ್ಲಿ ಸರ್ವೆಯನ್ನು ಮಾಡಿಸಿರುತ್ತಾರೆ, ಆ ಬಗ್ಗೆ ನಾನು ದಾಖಲೆಯ್ನು ನೋಡಿರುತ್ತೇನೆ. ನನಗೆ ಸರ್ವೆ ದಿನಾಂಕ ಗೊತ್ತಿಲ್ಲ. ನಾನು ಸರ್ವೆಯ ದಾಖಲೆಗಳನ್ನು ನೋಡಿರುವುದಿಲ್ಲ. 4 ನೇ ಪ್ರತಿವಾದಿಯು ವಾದಿಯರಿಗೆ ಯಾವುದೇ ರೀತಿಯಿಂದ ತೊಂದರೆ ಕೊಟ್ಟಿಲ್ಲ, ವಾದಿಯರಿಗೆ ಸಹಾಯ ಮಾಡಲು 4 ನೇ ಪ್ರತಿವಾದಿಯ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ಮಾಲೀಕರಾದ ದಳವಾಯಿ ರವರು ನೀಡಿರುತ್ತಾರೆ.

ಮರು ವಿಚಾರಣೆಃಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಮ್ಎಫಸಿ ನ್ಯಾಯಾಲಯ,
ಅಥಣಿ.